ಸಾರ್ವಜನಿಕ ಆರೋಗ್ಯ ಜಾಗೃತಿ

# ತಂಬಾಕು ವಸ್ತುಗಳ ಎಚ್ಚರಿಕೆಯ ಚಿತ್ರಗಳು ಜೀವವನ್ನು ಉಳಿಸಬಲ್ಲವು !




## ತಂಬಾಕು ವಸ್ತುಗಳ ಹೊರೆ !

1) ಪ್ರಪಂಚದಾದ್ಯಂತ ತಂಬಾಕು ವಸ್ತುಗಳು ವಾಸಿಮಾಡಲಾಗದಂತಹ ಕಾಯಿಲೆಗಳಿಗೆ ದಾರಿ ಮಾಡಿಕೊಡುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಪ್ರತಿ ವರ್ಷ 5.4 ಮಿಲಿಯನ್ ಜನರು ಕೇವಲ ತಂಬಾಕು ವಸ್ತುಗಳಿಂದ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ.

2) ತಂಬಾಕು ವಸ್ತುಗಳಿಂದ ಒಟ್ಟಾರೆಯಾಗಿ ಸಂಭವಿಸುವ ಮರಣದ ಪ್ರಮಾಣ 9 ಲಕ್ಷ, ಇದರಲ್ಲಿ ಭಾರತದಲ್ಲೇ ಪ್ರತಿದಿನ 2,500 ಜನ ತಂಬಾಕು ವಸ್ತುಗಳಿಂದ ಸಾವನ್ನಪ್ಪುತ್ತಿದ್ದಾರೆ.

3) ಇತರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಮಾತ್ರ ಅತಿ ಹೆಚ್ಚು ಕ್ಯಾನ್ಸರ್ ರೋಗಿಗಳಿದ್ದಾರೆ. ಇದರಲ್ಲಿ 90% ಕ್ಯಾನ್ಸರ್ ರೋಗಗಳು ತಂಬಾಕು ವಸ್ತುಗಳಿಗೆ ಸಂಬಂಧಿಸಿದ್ದವಾಗಿರುತ್ತವೆ. ಇದರಲ್ಲಿ 56.4% ಕ್ಯಾನ್ಸರ್ ರೋಗಿಗಳು ಗಂಡಸರು ಹಾಗೂ 44.9% ಕ್ಯಾನ್ಸರ್ ರೋಗಿಗಳು ಹೆಂಗಸರು.

4) ಒಂದು ಅಂದಾಜಿನ ಪ್ರಕಾರ 2010ರ ವೇಳೆಗೆ ಸುಮಾರು 10 ಲಕ್ಷ ಜನರು ಧೂಮಪಾನದಿಂದ ಸಾವನ್ನಪ್ಪುತ್ತಾರೆ. ಇದರ ಪ್ರಕಾರ 2020ರ ವೇಳೆಗೆ ಸಂಭವಿಸುವ ಒಟ್ಟು ಮರಣದ ಪ್ರಮಾಣದಲ್ಲಿ 13% ಸಾವುಗಳು ಕೇವಲ ತಂಬಾಕು ವಸ್ತುಗಳಿಂದ ಭಾರತದಲ್ಲಿ ಸಂಭವಿಸುತ್ತದೆ.

5) ಗ್ಲೋಬಲ್ ಯೂತ್ ಟೊಬೇಕೊ ಸರ್ವೇ 2006ರ ಪ್ರಕಾರ (ಉಜಖಿಖ) ಪ್ರತಿದಿನ ಭಾರತದಲ್ಲಿ 5500 ಯುವಕರು ಧೂಮಪಾನ ಚಟಕ್ಕೆ ವಶವಾಗುತ್ತಿದ್ದಾರೆ.

6) ತಂಬಾಕು ವಸ್ತುಗಳಿಂದ ಬರುವ ಆದಾಯಕ್ಕಿಂತಲು ಅವು ಸೃಷ್ಟಿಮಾಡುವ ಕಾಯಿಲೆಗಳ ಚಿಕಿತ್ಸೆಗೆ ಹೆಚ್ಚಿನ ಹಣವನ್ನು ಭರಿಸಬೇಕಾಗಿದೆ. ಒಂದು ಹೊಸ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಒಂದು ವರ್ಷಕ್ಕೆ 4,535 ಕೋಟಿ ರೂ.ಗಳನ್ನು ಕೇವಲ ಸಿಗರೇಟು ಮತ್ತು ಬೀಡಿ ಸೇವನೆ ಮಾಡುವುದರಿಂದ ಬರುವ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ವೆಚ್ಚಮಾಡಬೇಕಾಗಿದೆ. ಹಾಗೆಯೇ ಬಾಯಲ್ಲಿ ಹಾಕಿಕೊಂಡು ಅಗೆಯುವ ಗುಟ್ಕಾ, ಜರ್ದಾ, ಖಾನಿ, ಮುಂತಾದವುಗಳಿಂದ ಬರುವ ಕಾಯಿಲೆಗಳಿಗೆ ಪ್ರತಿ ವರ್ಷ 1425 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುತ್ತಿದೆ.

# ತಂಬಾಕು ವಸ್ತುಗಳ ಅಪಾಯಗಳ ಬಗ್ಗೆ ಸಾಕಷ್ಟು ಪರಿಣಾಮಕಾರಿ ಪ್ರಭಾವ ಬೀರುವ ಎಚ್ಚರಿಕೆಯ ಚಿತ್ರಗಳು ಜೀವವನ್ನು ಉಳಿಸಬಲ್ಲವು !

ತಂಬಾಕು ವಸ್ತುಗಳಿಂದಾಗುವ ತೊಂದರೆಗಳು ಮತ್ತು ಅಪಾಯಗಳನ್ನು ಚಿತ್ರಗಳ ಮೂಲಕ ತೋರಿಸುವುದರಿಂದ ಇದು ಪ್ರಪಂಚದಾದ್ಯಂತ ಎಲ್ಲ ಜನರಿಗೂ ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆಯನ್ನು ನೀಡುತ್ತದೆ. ಹಾಗೆಯೇ ತಂಬಾಕು ವಸ್ತುಗಳ ಸೇವನೆಯಿಂದಾಗುವ ಅಪಾಯಗಳನ್ನು ಎಚ್ಚರಿಕೆಯ ಚಿತ್ರಗಳ ಮೂಲಕ ತೋರಿಸುವುದರಿಂದ ಜನರಲ್ಲಿರುವ ತಂಬಾಕು ವಸ್ತುಗಳ ಬಗ್ಗೆ ಇರುವ ಆಕರ್ಷಣೆ ಮತ್ತು ಅದಕ್ಕೆ ಮೊರೆಹೋಗುವುದನ್ನು ತಪ್ಪಿಸುವುದರ ಮೂಲಕ ತಂಬಾಕು ಮುಕ್ತ ಪರಿಸರವನ್ನು ನಿರ್ಮಿಸಬಹುದು.

ತಂಬಾಕು ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ವಿವರಣೆ ನೀಡುವಲ್ಲಿ ಬರವಣಿಗೆಗಳಿಂತ ಚಿತ್ರಗಳು ತುಂಬಾ ಪರಿಣಾಮಕಾರಿಯಾದ ಮುನ್ನೆಚ್ಚರಿಕೆಯನ್ನು ನೀಡುತ್ತದೆ. 1/3 ಭಾಗದಷ್ಟು ಅನಕ್ಷರಸ್ಥರಿರುವ ಭಾರತದಂತ ದೇಶದಲ್ಲಿ ತಂಬಾಕು ವಸ್ತುಗಳ ಬಳಕೆಯಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಎಚ್ಚರಿಕೆ ನೀಡುವಲ್ಲಿ ಮುನ್ನೆಚ್ಚರಿಕೆ ಚಿತ್ರಗಳು ಸಾಕಷ್ಟು ಪ್ರಭಾವ ಬೀರಿ ಜನರು ತಂಬಾಕು ವಸ್ತುಗಳಿಗೆ ಮೊರೆ ಹೋಗುವುದನ್ನು ತಡೆಯಬಲ್ಲವು.

ದೇಶಗಳು ತಂಬಾಕು ವಸ್ತುಗಳ ಅಪಾಯದ ಬಗ್ಗೆ ಮುನ್ನೆಚ್ಚರಿಕೆಯ ಚಿತ್ರಗಳನ್ನು ತೋರಿಸುವುದರ ಮೂಲಕ ಅದರ ಬಳಕೆಯನ್ನು ಕಡಿಮೆ ಮಾಡಿವೆ. ಹಾಗೆಯೇ ತಂಬಾಕು ವಸ್ತುಗಳ ಪ್ಯಾಕುಗಳ ಮೇಲೆ ಆರೋಗ್ಯಕ್ಕಾಗುವ ಅಪಾಯಗಳ ಚಿತ್ರಗಳನ್ನು ಪ್ರದರ್ಶಿಸುವುದರಿಂದ ಸಾಕಷ್ಟು ಜನ ಇದರಿಂದ ದೂರ ಇರುವ ಸಾಧ್ಯ ಇದೆ. ಬಲಶಾಲಿ ಮತ್ತು ಹೆಚ್ಚು ಪರಿಣಾಮಕಾರಿಯಾದ ಚಿತ್ರಗಳು ನಿಜರೂಪವಾಗಿ ತಂಬಾಕು ವಸ್ತುಗಳಿಂದಾಗುವ ಅಪಾಯದ ಪೆಟ್ಟನ್ನು ಪೂರ್ತಿಯಾಗಿ ವಿವರಿಸಿ ಅದರಿಂದಾಗುವ ನೋವು, ಮರಣಯಾತನೆ ಮತ್ತು ಅಂಗವಿಕಲತೆ ಇವೆಲ್ಲವುಗಳು ತಂಬಾಕು ವಸ್ತುಗಳ ಸೇವೆಯನ್ನು ತಡೆಯಲು ಸಹಕಾರಿಯಾಗಿದೆ.

## ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆಯ ಚಿತ್ರಗಳ ಪ್ರದರ್ಶನಕ್ಕೆ ಸಹಾಯ ಮಾಡುವಲ್ಲಿ ಇರುವಂತಹ ಅಂತರರಾಷ್ಟ್ರೀಯ ಪುರಾವೆಗಳು

- ಕೆನಡಾ ಮತ್ತು ಆಸ್ಟ್ರೇಲಿಯಾದಲ್ಲಿ ದೊರೆತಿರುವ ಪುರಾವೆಗಳ ಪ್ರಕಾರ ಧೂಮಪಾನ ಬಳಕೆಯಿಂದಾಗುವ ತೊಂದರೆಗಳ ಬಗ್ಗೆ ಹೆಚ್ಚಿನ ಅರಿವನ್ನು ಎಚ್ಚರಿಕೆಯ ಚಿತ್ರಗಳ ಮೂಲಕ ಮೂಡಿಸುವುದರಿಂದ ಧೂಮಪಾನವನ್ನು ಕಡಿಮೆ ಮಾಡಬಹುದು.
- ಬ್ರೆಜಿಲ್ ದೇಶದಲ್ಲಿ 54% ಧೂಮಪಾನಿಗಳು ಧೂಮಪಾನದಿಂದಾಗುವ ತೊಂದರೆಗಳನ್ನು ಎಚ್ಚರಿಕೆಯ ಚಿತ್ರಗಳ ಮೂಲಕ ತಿಳಿದುಕೊಂಡು ಅವರ ಅಭಿಪ್ರಾಯದಲ್ಲಿ ಬದಲಾವಣೆ ಮಾಡಿಕೊಂಡರು. ಮತ್ತು 67% ಧೂಮಪಾನಿಗಳು ಹೇಳಿರುವಂತೆ ಎಚ್ಚರಿಕೆಯ ಚಿತ್ರಗಳನ್ನು ನೋಡಿ ತಂಬಾಕು ವಸ್ತುಗಳನ್ನು ಬಿಡಬೇಕೆಂದು ನಿರ್ಧರಿಸಿದರು.
- ಯೂರೋಪಿಯನ್ ಸಂಯೋಗದ ಪ್ರಕಾರ 50% ಧೂಮಪಾನಿಗಳು ಎಚ್ಚರಿಕೆಯ ಚಿತ್ರಗಳನ್ನು ನೋಡಿ ಧೂಮಪಾನದ ಬಳಕೆಯ ಪ್ರಮಾಣವನ್ನು ಕಡಿಮೆ ಮಾಡಿದರು. ಹಾಗೂ 31% ಧೂಮಪಾನಿಗಳಿಗೆ ಈ ಎಚ್ಚರಿಕೆಯ ಚಿತ್ರಗಳು ಅವರ ಮನಃಪರಿವರ್ತನೆ ಮಾಡಿ ಆ ಚಟವನ್ನು ಬಿಡಲು ಸಹಾಯ ಮಾಡಿದೆ.
- ತಂಬಾಕು ವಸ್ತುಗಳ ದುಷ್ಪರಿಣಾಮದ ಬಗ್ಗೆ ಎಚ್ಚರಿಕೆಯ ಚಿತ್ರಗಳು ಪ್ರಪಂಚದಾದ್ಯಂತ ಬಂದಿರುವ ಫಲಿತಾಂಶದ ಪ್ರಕಾರ ಈ ಚಿತ್ರಗಳು ಸರಾಸರಿ 60 ಭಾರಿಗಿಂತಲೂ ಹೆಚ್ಚು ಪರಿಣಾಮಕಾರಿ ಪ್ರಭಾವವನ್ನು ಬೀರಿ ತಂಬಾಕು ವಸ್ತುಗಳಿಗೆ ವಶವಾಗುವುದನ್ನು ತಡೆಯುವಲ್ಲಿ ಪರಿಣಾಮ ಬೀರುತ್ತದೆ.

# ತಂಬಾಕು ವಸ್ತುಗಳಿಂದ ಆರೋಗ್ಯದ ಮೇಲೆ ಉಂಟಾಗುವ ಅಪಾಯಗಳ ಮುನ್ನೆಚ್ಚರಿಕೆಯ ಚಿತ್ರಗಳ ಗಾತ್ರ ವಿಸ್ತಾರ ಹೆಚ್ಚಾದಷ್ಟು, ಅವುಗಳು ಹೆಚ್ಚು ಪ್ರಭಾವ ಶಾಲಿಯಾಗಿರುತ್ತವೆ.

## ಅಂತರರಾಷ್ಟ್ರೀಯ ಉತ್ತಮ ಪ್ರಯೋಗಗಳು















| ಆಸ್ಟ್ರೇಲಿಯಾ | ಬ್ರೆಜಿಲ್ | ಕೆನಡಾ | ಥೈಲಾಂಡ್ | ಯುಕೆ (ಇಂಗ್ಲೆಂಡ್) |
|---|---|---|---|---|
| ಮುಂದೆ :30% | ಹಿಂದೆ ಅಥವಾ | ಮುಂದೆ : 50% | ಮುಂದೆ : 50% | ಮುಂದೆ : 43% |
| ಹಿಂದೆ : 90% | ಮುಂದೆ 100% | ಹಿಂದೆ : 50% | ಹಿಂದೆ : 50% | ಹಿಂದೆ : 53% |

## ತಂಬಾಕು ವಸ್ತುಗಳ ಎಚ್ಚರಿಕೆಯ ಚಿತ್ರಗಳ ಗಾತ್ರ ಮತ್ತು ವಿಸ್ತಾರ ಪ್ರಪಂಚದಾದ್ಯಂತ ಜಾರಿಯಲ್ಲಿರುವಂತೆ.

- ನ್ಯೂಜಿಲ್ಯಾಂಡ್ 60% (30% ಮುಂದೆ 90% ಹಿಂದೆ)
- ಬೆಲ್ಜಿಯಂ 56% (48% ಮುಂದೆ ಹಿಂದೆ ಮತ್ತು ಅಂಚುಗಳಲ್ಲಿ 63%)
- ಸ್ವಿಜ್ಜರ್‌ಲ್ಯಾಂಡ್ 56% (48% ಮುಂದೆ ಹಿಂದೆ ಮತ್ತು ಅಂಚುಗಳಲ್ಲಿ 63%)
- ಫೈನ್‌ಲ್ಯಾಂಡ್ 52% (45% ಮುಂದೆ 58% ಹಿಂದೆ)
- ಸಿಂಗಾಪುರ್ 50% (ಹಿಂದೆ ಮುಂದೆ ಸೇರಿ 50%)
- ಊರ್ಗ 50% (ಹಿಂದೆ ಮತ್ತು ಮುಂದೆ ಸೇರಿ 50%)
- ಚೈಲ್ 50% (ಹಿಂದೆ ಮತ್ತು ಮುಂದೆ ಸೇರಿ 50%)
- ವೆನಿಜಿಲಾ 50% (ಹಿಂದೆ ಅಥವಾ ಮುಂದೆ 100%)

## ಭಾರತದ ಚಿತ್ರಣ ವಿವರ

<table>
<tr><td>ಸರ್ಕಾರ ಹಿಂದೆ ಸೂಚಿಸಿರುವಂತಹ ಮುನ್ನೆಚ್ಚರಿಕೆಯ ಚಿತ್ರಗಳು ತುಂಬಾ ಪರಿಣಾಮಕಾರಿಯಾದ ಚಿತ್ರಗಳು / ಕಾರ್ಯಕ್ಷೇತ್ರದಲ್ಲಿ ಪ್ರಯೋಗ ಆಗಿರುವಂತಹವು</td><td>31 ಮೇ 2009ರ ನಂತರ ಚಾಲ್ತಿಯಲ್ಲಿ ಬರುವಂತಹ ಎಚ್ಚರಿಕೆಯ ಚಿತ್ರಗಳು ಮೃದು ಮತ್ತು ಬಲಹೀನ ಚಿತ್ರಗಳು / ಯಾವುದೇ ರೀತಿಯ ಪ್ರಯೋಗ ಆಗದಿರುವಂತಹವು</td></tr>
<tr><td>








ಈ ಹಿಂದೆ ಸೂಚಿಸಿರುವಂತಹ ಮುನ್ನೆಚ್ಚರಿಕೆಯ ಚಿತ್ರಗಳು ತಂಬಾಕು ವಸ್ತುಗಳಿಂದಾಗುವ ತೊಂದರೆಯನ್ನು ವಸ್ತುವಿನ ಹಿಂದೆ 50% ಮತ್ತು ಮುಂದೆ 50% ಪ್ರದರ್ಶಿಸಲಾಗಿದೆ.
</td><td>






ಪ್ರಸ್ತುತ ನಿಯಮಗಳ ಪ್ರಕಾರ ಮುನ್ನೆಚ್ಚರಿಕೆಯ ಚಿತ್ರಗಳು ತಂಬಾಕು ವಸ್ತುಗಳ ಮೇಲೆ ಕೇವಲ 40% ಪರಿಣಾಮ ಬೀರುವಂತೆ ದಿನಾಂಕ 30 ಮೇ 2009 ರಿಂದ ಜಾರಿಗೆ ಬರಲಿದೆ
</td></tr>
</table>

**ಅಂತರರಾಷ್ಟ್ರೀಯ ಒಪ್ಪಂದಗಳು:** ಭಾರತವು ತಂಬಾಕು ನಿಯಂತ್ರಣಕ್ಕಾಗಿ ಫ್ರೇಮ್ ವರ್ಕ್ ಕನ್ವೆನ್ಷನ್ ಆನ್ ಟೊಬ್ಯಾಕೊ ಕಂಟ್ರೋಲ್ ಪ್ರಥಮ ಅಂತರರಾಷ್ಟ್ರೀಯ ಸಮುದಾಯ ಆರೋಗ್ಯ ಒಪ್ಪಂದವನ್ನು ವಿಶ್ವ ಆರೋಗ್ಯ ಸಂಸ್ಥೆಯ ಜೊತೆಯಲ್ಲಿ ಮಾಡಿತು. ಎಫ್‌ಸಿಟಿಸಿಯು ತಂಬಾಕು ವಸ್ತುಗಳಿಗೆ ಸಂಬಂಧಿಸಿದಂತೆ ಎಚ್ಚರಿಕೆಯ ಚಿತ್ರಗಳನ್ನು ಕಾರ್ಯಗತಗೊಳಿಸಲು 27 ಫೆಬ್ರವರಿ 2008 ಅಂತಿಮ ಗಡಿಯನ್ನು ನೀಡಿತು. ಆದರೆ ಇಲ್ಲಿಯವರೆಗೂ ಯಾವುದೇ ತಂಬಾಕು ವಸ್ತುಗಳ ಮೇಲೆ ಎಚ್ಚರಿಕೆಯ ಚಿತ್ರಗಳನ್ನು ಪ್ರದರ್ಶಿಸಿಲ್ಲ. ಆದರೆ ಎಫ್‌ಸಿಟಿಸಿಯು ಶಿಫಾರಸ್ಸು ಮಾಡಿರುವಂತೆ ಈ ಮುನ್ನೆಚ್ಚರಿಕೆಯ ಚಿತ್ರಗಳ ಗಾತ್ರ ತಂಬಾಕು ವಸ್ತುಗಳ ಹಿಂದೆ 30% ಮುಂದೆ 30% ಪ್ರದರ್ಶಿಸಬೇಕು. ಆದರೆ ಭಾರತವು ಜಾರಿಗೆ ತರದೆ ಕೇವಲ 40% ತಂಬಾಕು ವಸ್ತುಗಳ ಮುಂದೆ ಎಚ್ಚರಿಕೆ ಚಿತ್ರಗಳನ್ನು ಪ್ರದರ್ಶಿಸಲು ಮುಂದಾಗಿದ್ದು – ಮತ್ತು ಈ ಮುಖಾಂತರ ಎಫ್‌ಸಿಟಿಸಿಯ ನಿಯಮಗಳನ್ನು ಕಡೆಗಣಿಸಿದೆ.

# ಆರೋಗ್ಯದ ಬಗ್ಗೆ ಎಚ್ಚರಿಕೆ ನೀಡುವಂತಹ ಚಿತ್ರಗಳ ಪ್ರದರ್ಶನಕ್ಕೆ ಸಾಕಷ್ಟು ಬಲವಾದ ಸಹಾಯ ಸಾರ್ವಜನಿಕರಿಂದ ಸಿಕ್ಕಿದೆ : ಭಾರತದಲ್ಲಿರುವ ಪುರಾವೆ.

ಸಿಗರೇಟು ಪ್ಯಾಕಿನ ಮೇಲೆ ಅದರ ಸೇವನೆಯಿಂದಾಗುವ ಅಪಾಯದ ಎಚ್ಚರಿಕೆಯ ಚಿತ್ರಗಳನ್ನು ಪ್ರದರ್ಶಿಸುವುದರ ಬಗ್ಗೆ ಒಂದು ಅಧ್ಯಯನವನ್ನು ಸಾಮಾನ್ಯ ಸಾರ್ವಜನಿಕರಲ್ಲಿ ಮಾಡಲಾಯಿತು. ಈ ಅಧ್ಯಯನವನ್ನು ಮುಂಬಯಿ ನಗರದ ಬೇರೆ ಬೇರೆ ಸ್ಥಳಗಳ ಮನೆಗಳು ಮತ್ತು ಕಾಲೇಜುಗಳಲ್ಲಿ ಒಟ್ಟು 712 ಜನರಲ್ಲಿ ಮಾಡಲಾಯಿತು ಇವರೆಲ್ಲರೂ 15 ವರ್ಷಕ್ಕಿಂತ ಮೇಲ್ಪಟ್ಟವರು.

## ಫಲಿತಾಂಶ :

1) 90%ಗಿಂತ ಹೆಚ್ಚು ಜನರು ಧೂಮಪಾನದಿಂದ ಆರೋಗ್ಯಕ್ಕಾಗುವ ತೊಂದರೆಗಳ ಬಗ್ಗೆ ಅರಿವನ್ನು ಹೊಂದಿದ್ದು ಅದು ಸಾವಿಗೆ ಎಡೆ ಮಾಡಿಕೊಡುತ್ತದೆಂಬುದನ್ನು ತಿಳಿದಿದ್ದಾರೆ.
2) ಸರಾಸರಿ 90% ಜನರ ಪ್ರಕಾರ ಸಿಗರೇಟು ಪ್ಯಾಕಿನ ಮೇಲೆ ಇರುವ ಎಚ್ಚರಿಕೆಯ ನಿಯಮಗಳ ಬಗ್ಗೆ ತಿಳಿದಿದ್ದಾರೆ. ಮತ್ತು 97% ಜನರು ಅಭಿಪ್ರಾಯ ಪಟ್ಟಿರುವುದೇನೆಂದರೆ ಭಾರತದಲ್ಲಿ ಸಿಗರೇಟು ಪ್ಯಾಕಿನ ಮೇಲೆ ಅದರಿಂದಾಗುವ ಅಪಾಯಗಳ ಎಚ್ಚರಿಕೆಯ ಚಿತ್ರಗಳನ್ನು ಪ್ರದರ್ಶಿಸಬೇಕು.
3) 88% ಜನರು ಬಲವಾಗಿ ಹೇಳುವುದಾದರೆ ತಂಬಾಕು ವಸ್ತುಗಳಿಂದ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚಿದ್ದರು ಸರ್ಕಾರವು ಸಿಗರೇಟು ಪ್ಯಾಕಿನ ಮೇಲೆ ಹಾಕಲಿರುವ ಎಚ್ಚರಿಕೆಯ ಚಿತ್ರಗಳು ನಕಾರಾತ್ಮಕ ಪ್ರಭಾವ ಬೀರುವಲ್ಲಿ ಸೋತಿವೆ.
4) ಸರಾಸರಿ 85% ಜನರ ಪ್ರಕಾರ ಸಿಗರೇಟು ಪ್ಯಾಕಿನ ಮೇಲೆ ಆರೋಗ್ಯಕ್ಕೆ ಆಗುವ ದುಷ್ಪರಿಣಾಮಗಳ ಚಿತ್ರವನ್ನು ಕೂಡಲೆ ಪ್ರದರ್ಶಿಸಬೇಕು ಎಂದಿದ್ದಾರೆ.
5) 68% ಜನರು ತಂಬಾಕು ವಸ್ತುಗಳಿಗೆ ಸಂಬಂಧಪಟ್ಟಂತೆ ಎಚ್ಚರಿಕೆಯ ಚಿತ್ರಗಳ ಪ್ರದರ್ಶನಕ್ಕೆ ಕಾನೂನು ತಡ ಮಾಡುತ್ತಿರುವುದಕ್ಕಾಗಿ ತುಂಬಾ ವ್ಯಥೆ ಪಡುತ್ತಿದ್ದಾರೆ.

## ಎಚ್ಚರಿಕೆಯ ಚಿತ್ರಗಳು ಪರಿಣಾಮ

1) 32.4% ಉತ್ತರ ಕೊಡುವವರು ಹೇಳುವುದೇನೆಂದರೆ ಧೂಮಪಾನ ಮಾಡದವರು ಧೂಮಪಾನ ಚಟಕ್ಕೆ ವಶವಾಗುವ ಮುನ್ನ ಎರಡು ಭಾರಿ ಯೋಚನೆ ಮಾಡುತ್ತಾರೆ.
2) 31.5% ಧೂಮಪಾನಿಗಳು ಧೂಮಪಾನಗಳ ತೊಂದರೆಗಳ ಬಗ್ಗೆ ಯೋಚಿಸಿ ಅದರ ಬಳಕೆಯನ್ನು ಕಡಿಮೆ ಮಾಡಿದ್ದಾರೆ.
3) 23% ಧೂಮಪಾನಿಗಳು ಧೂಮಪಾನವನ್ನು ತ್ಯಜಿಸುವುದರ ಬಗ್ಗೆ ಯೋಚಿಸಿದ್ದಾರೆ.

## ರಾಜನೀತಿ ಶಿಫಾರಸ್ಸು :

1) ಪರಿಣಾಮಕಾರಿಯಾದ ಎಚ್ಚರಿಕೆಯ ಚಿತ್ರಗಳನ್ನು ತಂಬಾಕು ವಸ್ತುಗಳ ಮೇಲೆ ಪ್ರದರ್ಶಿಸುವಂತೆ ಒತ್ತಾಯ ಪಡಿಸಬೇಕು.
2) ಈಗ ಪರಿಚಯಿಸಲಿರುವ ಮುನ್ನೆಚ್ಚರಿಕೆಯ ಚಿತ್ರಗಳನ್ನು ಸಮಾಜದ ಬೇರೆ ಬೇರೆ ಸಮುದಾಯಗಳಲ್ಲಿ ಪ್ರಯೋಗಿಸಿ ಆ ಚಿತ್ರಗಳು ಬೀರುವ ಪರಿಣಾಮವನ್ನು ಪರೀಕ್ಷಿಸಬೇಕು.
3) ನಂತರ ಪ್ರದರ್ಶಿಸಲಿರುವ ಎಚ್ಚರಿಕೆಯ ಚಿತ್ರಗಳು ಸಾಕಷ್ಟು ಪ್ರಭಾವಶಾಲಿಯಾಗಿರಬೇಕು. ಮತ್ತು ಅವುಗಳ ಗಾತ್ರ, ಹೊಂದಿರುವ ಚಿತ್ರ, ತಂಬಾಕು ವಸ್ತುಗಳಿಂದಾಗುವ ಅಪಾಯಗಳನ್ನು ಪ್ರದರ್ಶಿಸುವಲ್ಲಿ ಪರಿಣಾಮಕಾರಿಯಾಗಿರಬೇಕು.

HRIDAY
Health Related Information Dissemination Amongst Youth

ರಚನೆ : ಸಂಕಲನ, ಪ್ರಸಾರ, ಇನ್ಸಿಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್ ಹೃದಯೀ ಸಂಸ್ಥೆಯ ಪಾಲುಗಾರಿಕೆ ಮತ್ತು ಬ್ಲೂಮ್‌ಬರ್ಗ್ ಸಹಾಯದಿಂದ ಅಡ್ವೊಕೇಸಿ ಫೋರಂ ಫಾರ್ ಟೊಬೆಕೋ ಕಂಟ್ರೋಲ್ ಪರವಾಗಿ ತಂಬಾಕು ವಸ್ತುಗಳ ಬಳಕೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಇಡುತ್ತಿರುವ ಮೊದಲ ಹೆಜ್ಜೆ.